ಶ್ರೀ ರಾಮಕೃಷ್ಣ ಹೆಗ್ಗಡೆ.—ಅದನ್ನಾಗಲೆ ಮಾಡಿದ್ದೇವೆ, ಅದರ ಒಟ್ಟು ವೆಚ್ಚ ಸುಮಾರು 24 ಕೋಟಿ ರೂಪಾಯಿಗಳು. ಸುಮಾರು 3,000 ಹಳ್ಳಿಗಳಲ್ಲಿ ಕುಡಿಯುವ ನೀರಿನ ಅನುಕೂಲವೇ ಇಲ್ಲ, ಅವುಗಳಿಗೆ ನೀರನ್ನೊದಗಿಸಲು ಅಷ್ಟು ವೆಚ್ಚವಾಗಬಹುದು. ಕೊಳಾಯಿಯ ಮೂಲಕ ನರಬರಾಯಿ ಇಲ್ಲದಿರುವ ಕಡೆಗೆ ಪ್ರೊಜೆಕ್ಟೆಡ್ ನಪ್ಲೈ ಮಾಡಬೇಕು. ಇದನ್ನು 4 ವರ್ಷಗಳ ಅವಧಿಯಲ್ಲಿ ಮುಗಿಸ ಬೇಕೆಂದಿದ್ದೇವೆ.

ಶ್ರೀ ಎ. ಜೆ. ದೊಡ್ಡಮೇಟಿ.—ಈ 3 ಗ್ರಾಮ ಪಂಚಾಯತಿಗಳ ಆದಾಯ ಎಷ್ಟು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಹೊಳೆಆಲೂರು ಪಂಚಾಯತಿ ಆದಾಯ ಚೆನ್ನಾಗಿದೆ, ನರೇಗಲ್‌ನಲ್ಲಿ ಆದಾಯ ಬರುವ ಸಂಭವವೇ ಇಲ್ಲ, ಅದರ ಅಂದಾಜುಮಾಡಿಲ್ಲ. ಗಜೇಂದ್ರಗಡದ ವಿಚಾರದ ಬಗ್ಗೆ ಹೇಳಲು ನೋಟೀಸ್ ಬೇಕು.

Mr. SPEAKER.—I hold over Question No. 680. At least on Monday some other arrangement should be made.

Raising the Ane across Waste-Weir Halla of Bugudanahalli Tank in Tumkur Taluk.

*Q.—698. Smt. G. C. BHAGEERATHAMMA (Tumkur).—

Will the Government be pleased to state :—

when the estimate for raising the ane across waste-weir halla of Bugudanahalli tank in Doddanaravangala village limits, Tumkur Taluk was sanctioned ?

*A.—Sri ALUR HANUMANTHAPPA (Deputy Minister for Minor Irrigation).—

During October 1962.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಈ ಕೆಲಸಕ್ಕೆ ಅಂದಾಜು 6 ವರ್ಷಗಳ ಹಿಂದೆಯೇ ಮಂಜೂರಾಗಿರಲಿಲ್ಲವೆ ? ಉತ್ತರದಲ್ಲಿ 2 ವರ್ಷದ ಹಿಂದೆ ಮಂಜೂರಾಗಿದೆ ಎಂದಿದೆ. ಎರಡು ಸಲ ಮಂಜೂರಾಗುವುದಕ್ಕೆ ಕಾರಣವೇನು ?

† ಶ್ರೀ ಆಲೂರು ಹನುಮಂತಪ್ಪ.—ಅದು 12-10-1962 ರಲ್ಲಿ ಮಂಜೂರಾಗಿರುವುದು. ಕೆಲಸ ಪ್ರಾರಂಭವಾಗುವುದಕ್ಕೆ ಅಡಚಣೆಯೇನೆಂದರೆ ಅಕ್ವಿಜಿಷನ್ ನಿಧಾನವಾಗಿದೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಕೆಲಸ ಮಾಡಲು ಇನ್ನೂ ಎಷ್ಟು ಕಾಲ ಬೇಕು ?

ಶ್ರೀ ಆಲೂರು ಹನುಮಂತಪ್ಪ.—ಪ್ರೊಸೀಡಿಂಗ್ಸ್ ನಡೆದಿದೆ, ಭೂಮಿ ಸ್ವಾಧೀನಕ್ಕೆ ಬಂದಮೇಲೆ ಕೆಲಸ ತಗೆದುಕೊಳ್ಳಲಾಗುವುದು.

Irrigation wells and pumpsets allotted to the Belgaum Division during 1963-64.

*Q.—499. Smt. SUSHILABAI SHAH (Bagewadi).—

Will the Government be pleased to state :—

(a) the number of irrigation wells and pumpsets allotted to the Belgaum Division during the year 1963-64 (District-wise information may be given) ;

(*b*) the number of irrigation wells sanctioned to Bagewadi Taluk during the year 1963-64 ;

(*c*) the number of applications sent by the public in the same year for the above in the said taluk ;

(*d*) the number of applications sanctioned during the same period ?

A.—Sri M. V. KRISHNAPPA (Minister of Revenue).—

(*a*)—

	Wells	*Pumpsets*		
		Diesel	*Electrical*	
Belgaum ...	472	275	150	Districtwise
Bijapur ...	300	275		allotments
Dharwar ...	300	100		have not
North Kanara ...	165	50		been made.
Total ...	1,237	700		

(*b*) Seventy wells.

(*c*) Three hundred applications.

(*d*) Seventy applications were sanctioned.

ಶ್ರೀಮತಿ ಸುಶೀರಾಬಾಯಿ ಹೀರಾಚಂದ್ ಷಾ.—ಬಾಗೇವಾಡಿ ತಾಲ್ಲೂಕಿನಿಂದ ಪಂಪು ಸೆಟ್ಟುಗಳಿಗಾಗಿ ಎಷ್ಟು ಅರ್ಜಿಗಳು ಬಂದಿದ್ದವು ಮತ್ತು ಎಷ್ಟು ಪಂಪು ಸೆಟ್ಟುಗಳನ್ನು ಕೊಡಲಾಗಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—300 ಅರ್ಜಿಗಳು ಬಂದಿದ್ದವು, 70 ಪಂಪು ಸೆಟ್ಟುಗಳನ್ನು ಕೊಟ್ಟಿದೆ.

ಶ್ರೀಮತಿ ಸುಶೀರಾಬಾಯಿ ಹೀರಾಚಂದ್ ಷಾ.—ಬಾಗೇವಾಡಿ ತಾಲ್ಲೂಕಿನಲ್ಲಿ ಉಳ್ಳಾಗಡ್ಡೆ ಮತ್ತು ಮೆಣಸಿನಕಾಯಿ ಹೆಚ್ಚಾಗಿ ಬೆಳೆಯುವುದರಿಂದ ಕೇಳಿರುವವರೆಲ್ಲರಿಗೂ ಪಂಪು ಸೆಟ್ಟುಗಳನ್ನು ಒದಗಿಸುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಲ್ಲಿಗೆ ಹೊಸದಾಗಿ ಪವರ್ ಲೈನ್ ಹಾಕಬೇಕು, ಈಗ ಇರುವ ಪವರ್ ಸಾಲದು, ಸಾಧ್ಯವಾದ ಕೂಡಲೆ ಲೈನ್ ಹಾಕುತ್ತೇವೆ ಎಂದು ವಿದ್ಯುಚ್ಛಕ್ತಿ ಬೋರ್ಡಿನವರು ಹೇಳುತ್ತಾರೆ.

ಶ್ರೀಮತಿ ಸುಶೀರಾಬಾಯಿ ಹೀರಾಚಂದ್ ಷಾ.—ಅಲ್ಲಿ ಪವರ್ ಇಲ್ಲವಾದ್ದರಿಂದ ಡೀಸಲ್ ಪಂಪು ಸೆಟ್ಟನ್ನು ಒದಗಿಸುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದಕ್ಕೆ ತೊಂದರೆಯಿಲ್ಲ, ಸಾಧ್ಯವಿರುವಷ್ಟು ಒದಗಿಸುತ್ತೇವೆ.

Sri C. S. HULKOTI.—What is the total number of applications received for irrigation wells in that area ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ತಾಲ್ಲೂಕಿನಿಂದ 300 ಅರ್ಜಿಗಳು ಬಂದಿದ್ದವು, 70 ಪಂಪು ಸೆಟ್ಟುಗಳನ್ನು ಕೊಟ್ಟಿದ್ದೇವೆ. ಹಳೇ ಬಾವಿಗಳ ಕೆಲಸವನ್ನು ಮುಗಿಸಲು 15 ಲಕ್ಷ ರೂಪಾಯಿಗಳನ್ನು ಬೇರೆ ಕೊಡಲಾಗಿದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಬೆಳಗಾಂ ಡಿವಿಜನ್ನಿಗೆ 150 ವಿದ್ಯುತ್ ಪಂಪು ಸೆಟ್ಟುಗಳನ್ನು ಕೊಟ್ಟಿರುವುದು ಕಡಮೆಯಲ್ಲವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮುಂದೆ ಜಾಸ್ತಿ ಕೊಡುತ್ತಾರೆ.

ಶ್ರೀ ಆರ್. ಮುನಿಸ್ವಾಮಯ್ಯ.—ವಿದುಚ್ಛಕ್ತಿ ಪಂಪು ಸೆಟ್ಟುಗಳನ್ನು ಕೊಡಲು ಇರುವ ಅಡ್ಡಿಯೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಪವರ್ ಲೈನು ಹಾಕಬೇಕು, ಅದಕ್ಕೆ ಬಹಳ ಹಣ ಬೇಕು.

ಶ್ರೀ ಎಸ್. ಗೋಪಾಲ ಗೌಡ.—ಬಿಜಾಪುರ ಜಿಲ್ಲೆ ಯಾವಾಗಲೂ ಕ್ಷಾಮ ಪೀಡಿತವಾಗಿರುವುದರಿಂದ ವಿಶೇಷ ನೀರಾವರಿ ಯೋಜನೆ ಮಾಡುವುದಾಗಿ ಹಿಂದೆ ಹೇಳಿದ್ದೀರಿ. ಆ ಯೋಜನೆ ಈಗ ಕಾರ್ಯಗತವಾಗುವ ಸಂಭವವಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೇಳಿದ್ದು ನಿಜ, ಈಗ 50 ಲಕ್ಷ ರೂಪಾಯಿಗಳನ್ನು ಮಂಜೂರ ಮಾಡಿ 14 ಕೆರೆಗಳ ಕೆಲಸ ನಡೆಯುತ್ತಿದೆ. ಇದರ ಜೊತೆಗೆ ನಾಲ್ಕು ಸಾವಿರ ಚಿಲ್ಲರೆಗಳಷ್ಟು ಹೆಚ್ಚು ಇರಿಗೇಷನ್ ವೆಲ್ಸ್ ತೆಗೆಯಲು ಅದೊಂದೇ ಜಿಲ್ಲೆಗೆ ಹಾಗೆ ಅವಕಾಶಮಾಡಿದೆ. ಅಲ್ಲದೆ ಭಾರಿ ಪ್ರಮಾಣದ ಎರಡು ಮೇಜರ್ ಇರಿಗೇಷನ್ ಡ್ಯಾಂ ಪ್ರಾಜೆಕ್ಟ್ ಕೂಡ ಮಾಡುವುದಿದೆ.

ಶ್ರೀ ಜಿ. ರಾಮೇಗೌಡ.—ಹೆಚ್ಚು ನೀರಾವರಿ ಪಂಪುಸೆಟ್ಟುಗಳನ್ನು ಕೊಡದೇ ಇರುವುದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಲೈನುಗಳು ಇಲ್ಲದಿರುವುದರಿಂದ ಮತ್ತು ಕಾಪರು ವೈರುಗಳು ಸಿಕ್ಕದೇ ಇರುವುದರಿಂದ ಸ್ವಲ್ಪ ನಿಧಾನವಾಗಿದೆ.

Sri R. N. LAKSHMIPATHI.—Sir, the Hon'ble Minister is aware that wells cannot be completed within three thousand rupees. Will the Government consider enhancing the grant to Rs. 5,000 ?

Sri M. V. KRISHNAPPA.—In the taluk from which Sri Lakshmipathi comes, a well can be constructed within Rs. 2,000, whereas in other places or taluks, they require Rs. 5,000, Rs. 7,000 and sometimes Rs. 10,000 also. However, we have written to the Central Government to enhance this amount from Rs. 3,000 to Rs. 5,000.

ಶ್ರೀಮತಿ ನುಶೀಲಾಬಾಯಿ ಹೀರಾಚಂದ್ ಷಾ.—ಬಾಗೇವಾಡಿಯಲ್ಲಿ ಎಲೆಕ್ಟ್ರಿಸಿಟಿ ಇಲ್ಲದೇ ಇರುವುದರಿಂದ ಬರೀ ಡೀಸಲ್ ಸೆಟ್ಟುಗಳನ್ನು ಕೊಡಬೇಕಾಗಿತ್ತು. ಆದರೆ ಅಲ್ಲಿ ಎಲೆಕ್ಟ್ರಿಕ್ ಪಂಪುಸೆಟ್ಟುಗಳನ್ನು ಕೊಟ್ಟು ಕೆಲವು ಕಡೆಗಳಲ್ಲಿ ಅದಲುಬದಲಾಗಿವೆ. ಇದನ್ನು ಸರಿಪಡಿಸಿ ಬರೀ ಡೀಸಲ್ ಸೆಟ್ಟುಗಳನ್ನು ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೆಲವು ಕಡೆ ಹಾಗೆ ಆಗಿದ್ದರೆ ಅದನ್ನು ಸರಿಪಡಿಸಬಹುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—70 ಬಾವಿಗಳಿಗೆ ಪಂಪುಸೆಟ್ಟುಗಳನ್ನು ಕೊಟ್ಟಿದೆ ಎಂದು ಹೇಳಿದ್ದೀರಿ. ಇದರಲ್ಲಿ ಸರ್ವಿಸ್ಸು ಆಗಿರುವುದು ಎಷ್ಟು ?

ಶ್ರೀ ಎಂ. ವಿ. ಕೃಷ್ಣಪ್ಪ.—200 ಅರ್ಜಿಗಳು ಬಂದುದರಲ್ಲಿ 150 ಪಂಪುಸೆಟ್ಟುಗಳನ್ನು ಈಗಾಗಲೇ ಕೊಡಲಾಗಿದೆ.

ಒಬ್ಬ ಸದಸ್ಯರು.—ಡೀಸಲು ಸೆಟ್ಟುಗಳನ್ನು ಕೊಡುವುದರಿಂದ ಒಕ್ಕಲಿಗರಿಗೆ ಮಿತವ್ಯಯವಾಗುವುದಿಲ್ಲ ಮತ್ತು ಇದರ ಖರ್ಚು ಹೆಚ್ಚು ಬರುತ್ತದೆ ಎನ್ನುವುದು ಎಲ್ಲರಿಗೂ ಈಗ ಮನವರಿಕೆಯಾಗಿರುವುದರಿಂದ ಇನ್ನು ಮುಂದೆ ಎಲೆಕ್ಟ್ರಿಸಿಟಿ ಬಂದಮೇಲೆ ಇಂತಹ ಪಂಪುಸೆಟ್ಟುಗಳನ್ನು ಕೊಡುವುದೊಳ್ಳೆಯದಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಹೇಳುವುದೇನೋ ಸರಿ. ಆದರೆ ಹೆಚ್ಚು ಪಂಪುಗಳನ್ನು ಕೊಡಬೇಕೆಂದು ಈ ಮಾನ್ಯ ಸಭೆಯಲ್ಲೇ ವಾದ ಮಾಡುತ್ತಿದ್ದರು. ಅಲ್ಲದೆ ಡೀಸಲ್ ಸೆಟ್ಟುಗಳು ಅಷ್ಟು ಎಕನಾಮಿಕಲ್ ಆಗಿ ಕೆಲಸವನ್ನೂ ಮಾಡುವುದಿಲ್ಲ. ಎಲೆಕ್ಟ್ರಿಕ್ ಪಂಪುಸೆಟ್ಟುಗಳನ್ನು ಕೊಡುವುದು ಸಾಧುವಾದುದು. ಆದರೆ ಅದು ನಿಧಾನವಾಗುತ್ತದೆ ಎಂದು ಒತ್ತಾಯ ಬಂದುದರಿಂದ ಡೀಸಲ್ ಸೆಟ್ಟುಗಳನ್ನೇ ಕೆಲವು ಕಡೆಗಳಲ್ಲಿ ಕೊಡಬೇಕಾಯಿತು. ಸರಕಾರದ ಮುಂದೆಯೂ ಕೂಡ ಎಲೆಕ್ಟ್ರಿಸಿಟಿ ಬಂದಮೇಲೆ ಪಂಪುಸೆಟ್ಟುಗಳನ್ನು ಕೊಡಬೇಕೆಂದು ಇದೆ.

ಶ್ರೀ ಎಸ್. ಪಿ. ಹಾಯಿದೆ.—ಉತ್ತರ ಕನ್ನಡ ಜಿಲ್ಲೆಗೆ ಬರೀ 50 ಪಂಪುಸೆಟ್ಟುಗಳನ್ನು ಕೊಡಲಾಗಿದೆ ಎಂದು ಹೇಳಿದ್ದೀರಿ. ಇಷ್ಟು ಕಡಮೆ ಕೊಡಲು ಕಾರಣವೇನು ? ಹೆಚ್ಚು ಸಂಖ್ಯೆಯಲ್ಲಿ ಅರ್ಜಿಗಳು ಬಂದಿರಲಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಡೀಸಲ್ ಸೆಟ್ಟುಗಳನ್ನು ಹೆಚ್ಚಿಗೆ ಕೊಟ್ಟಿಲ್ಲ. ಎಲೆಕ್ಟ್ರಿಸಿಟಿ ಬಂದಮೇಲೆ ಮುಂದೆ ಹೆಚ್ಚಿಸಬಹುದು.

ಶ್ರೀ ಎಸ್. ಎಂ. ಗುರ್ರೆಡ್ಡಿ.—ಬಾಗೆವಾಡಿ ತಾಲ್ಲೂಕಿಗೆ ಯಾವ ಮೇಜರು ಇರಿಗೇಷನ್ನೂ ಬರುವ ಹಾಗಿಲ್ಲ ಮತ್ತು ಬರಲಿಕ್ಕೆ ಸಾಧ್ಯವಿಲ್ಲ. ಆದರೆ ಇಲ್ಲಿ 300 ಅರ್ಜಿಗಳು ಮಾತ್ರ ಬಂದಿವೆ ಎಂದು ಹೇಳಿದ್ದೀರಿ. ಆದರೆ ಇದುವರೆಗೆ 770 ಅರ್ಜಿಗಳು ಪಂಪುಸೆಟ್ಟುಗಳಿಗಾಗಿ ಬಂದಿವೆ. ಅದರಿಂದ ಬಾಗೇವಾಡಿ ತಾಲ್ಲೂಕಿಗೆ ಹೆಚ್ಚು ಸಂಖ್ಯೆಯಲ್ಲಿ ಪಂಪುಸೆಟ್ಟುಗಳನ್ನು ಕೊಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬಿಜಾಪುರ ಜಿಲ್ಲೆಯಲ್ಲಿರುವ ಕೆಲವು ತಾಲ್ಲೂಕುಗಳಲ್ಲಿ ಎಂದರೆ ಸಿಂದಗಿ, ಬಾಗೇವಾಡಿ ಮತ್ತು ಇಂಡಿ ಇಲ್ಲಿ ಹೆಚ್ಚಿಗೆ ಬಾವಿಗಳನ್ನು ಕೊಡಬೇಕೆನ್ನುವುದೇ ಸರಕಾರದ ಉದ್ದೇಶವಾಗಿದೆ. ಅದರಂತೆ ಇನ್ನು ಮುಂದೆ ಹೆಚ್ಚು ಕೊಡಲು ಪ್ರಯತ್ನ ಮಾಡುತ್ತೇವೆ.

———